# ಸ್ವಚ್ಛ ಭಾರತ ಮಿಷನ್

# ನೈರ್ಮಲ್ಯ ಮತ್ತು ಸ್ವಚ್ಛತೆ

# ಪರಿಸರ ನೈರ್ಮಲ್ಯ ಮತ್ತು ಸ್ವಚ್ಛತೆ

- ವೈಯಕ್ತಿಕ ಸ್ವಚ್ಛತೆ
- ಕೌಟುಂಬಿಕ ಸ್ವಚ್ಛತೆ
  ಸಮುದಾಯ ನೈರ್ಮಲ್ಯ
- ಕೌಟುಂಬಿಕ ಸ್ವಚ್ಛತೆ
  ಸಮುದಾಯ ನೈರ್ಮಲ್ಯ

# ವೈಯಕ್ತಿಕ ಶುಚಿತ್ವ

- ಪ್ರತಿದಿನ ಹಲ್ಲುಗಳನ್ನು ಉಜ್ಜುವುದರಿಂದ ಹಲ್ಲಿನ ಖಾಯಿಲೆಯನ್ನು ತಡೆಗಟ್ಟಬಹುದು.
- ಪ್ರತಿದಿನ ಸ್ನಾನ ಮಾಡುವುದರಿಂದ ಚರ್ಮದ ರೋಗವನ್ನು ತಡೆಗಟ್ಟ ಬಹುದು.
- ಮಲ ವಿಸರ್ಜನೆ ನಂತರ, ಮಕ್ಕಳ ಮಲವನ್ನು ಸುರಕ್ಷಿತವಾಗಿ ವಿಲೇವಾರಿ ಮಾಡಿದ ನಂತರ, ಅಡುಗೆ ಮಾಡುವ ಮೊದಲು, ಊಟ ಮಾಡುವ ಮೊದಲು, ಮಕ್ಕಳಿಗೆ ಹಾಲು ಉಣಿಸುವ ಮೊದಲು, ಕೈಯನ್ನು ಸಾಬೂನಿನಿಂದ ತೊಳೆಯಬೇಕು. ಈ ಅಭ್ಯಾಸದಿಂದ ಶೇ.೪೦%ರಷ್ಟು ರೋಗಗಳನ್ನು ತಡೆಗಟ್ಟಬಹುದು.
- ತಲೆ ಕೂದಲನ್ನು ಪ್ರತಿದಿನ ಸ್ವಚ್ಛವಾಗಿಡುವುದರಿಂದ ಹೇನನ್ನು ತಡೆಗಟ್ಟಬಹುದು.
- ಬೆರಳಿನ ಉಗುರುಗಳನ್ನು ಕನಿಷ್ಟ ವಾರಕ್ಕೊಮ್ಮೆ ತಪ್ಪದೇ ಮೊಟಕುಗೊಳಿಸುವುದರಿಂದ ಮಲದಿಂದ ಹರಡುವ ರೋಗಗಳನ್ನು ತಡೆಗಟ್ಟಬಹುದು.
- ಮಲ ವಿಸರ್ಜನೆಗೆ ಶೌಚಾಲಯವನ್ನೇ ಉಪಯೋಗಿಸುವುದು.
- ಹೊರಗೆ ಹೋಗುವಾಗ ಪಾದರಕ್ಷೆಗಳನ್ನು ಬಳಸುವುದರಿಂದ ಕೊಕ್ಕೆ ಹುಳುಗಳಿಂದ ರಕ್ಷಣೆ ಹೊಂದಬಹುದು.

# ಕೌಟುಂಬಿಕ ಶುಚಿತ್ವ

- ಕುಡಿಯುವ ನೀರನ್ನು ಸ್ವಚ್ಛವಾದ ಪಾತ್ರೆಗಳಲ್ಲಿ ಸಂಗ್ರಹಿಸಿ ಎತ್ತರವಾದ ಸ್ಥಳದಲ್ಲಿ ಮುಚ್ಚಿಡುವುದರಿಂದ, ಸಾಕು ಪ್ರಾಣಿಗಳಿಂದ ಮತ್ತು ಚಿಕ್ಕ ಮಕ್ಕಳಿಂದ ಕಲುಷಿತವಾಗುವುದನ್ನು ತಡೆಗಟ್ಟಬಹುದು.
- ಕುಡಿಯುವ ನೀರಿನಲ್ಲಿ ಬೆರಳುಗಳನ್ನು ಅದ್ದದಂತೆ ಕಾಳಜಿ ವಹಿಸಬೇಕು.
- ನೀರಿನ ಶುದ್ಧತೆ ಬಗ್ಗೆ ಸಂಶಯ ಬಂದರೆ ನೀರನ್ನು ಸೋಸಿ, ಚೆನ್ನಾಗಿ ಕುದಿಸಿ, ಆರಿಸಿ ಬಳಸಬೇಕು.
- ಬಳಸಿದ ನೀರನ್ನು ಹತ್ತಿರದ ಚರಂಡಿಗೆ ಹರಿಸಬೇಕು. ಚರಂಡಿ ಇಲ್ಲದಿದ್ದಲ್ಲಿ ಕೈ ತೋಟಕ್ಕೆ ಅಥವಾ ಇಂಗು ಗುಂಡಿಗೆ ಹರಿಸಿ ಸೊಳ್ಳೆಯ ಸಂತಾನೋತ್ಪತ್ತಿಯನ್ನು ತಡೆಗಟ್ಟಬಹುದು.
- ಮನೆಯ ಕಸ ಮತ್ತು ಕೊಟ್ಟಿಗೆ ಕಸವನ್ನು ಕಾಂಪೋಸ್ಟ್ ಗುಂಡಿಗೆ ಹಾಕಿ ಮನೆಯ ಸುತ್ತಮುತ್ತಲಿನ ಸ್ವಚ್ಛತೆ ಕಾಪಾಡಬಹುದು ಮತ್ತು ಉತ್ತಮ ಗೊಬ್ಬರ ಪಡೆಯಬಹುದು.

# ಸಮುದಾಯ ನೈರ್ಮಲ್ಯ

- ಕುಡಿಯುವ ನೀರಿನ ಮೂಲಗಳನ್ನು ಸಂಗ್ರಹಿಸುವ ಸ್ಥಳಗಳನ್ನು ಕಟ್ಟೆಯ ಸುತ್ತಮುತ್ತ ಸ್ವಚ್ಛತೆಯನ್ನು ಕಾಪಾಡಿ ಕುಡಿಯುವ ನೀರು ಕಲುಷಿತವಾಗುವುದನ್ನು ತಡೆಗಟ್ಟಬಹುದು.
- ಬಟ್ಟೆ ಒಗೆಯುವ ಕಟ್ಟೆ, ಜಾನುವಾರುಗಳು ಕುಡಿಯುವ ನೀರಿನ ತೊಟ್ಟಿಯನ್ನು ಸದಾ ಸ್ವಚ್ಛವಾಗಿಡಬೇಕು
- ಶಾಲಾ ಮಕ್ಕಳು ಶಾಲೆಯ ಶೌಚಾಲಯ ಮತ್ತು ಮೂತ್ರಾಲಯ ಗಳನ್ನು ಸರಿಯಾಗಿ ಬಳಸಿ ಮತ್ತು ನಿರ್ವಹಿಸುವುದರ ಮೂಲಕ ಶಾಲಾ ಆವರಣದ ನೈರ್ಮಲ್ಯವನ್ನು ಕಾಪಾಡಬಹುದು.
- ಬೀದಿಗಳ ಕಸದ ಗುಂಡಿಗಳಲ್ಲಿಯ ಕಸವನ್ನು ಊರ ಹೊರಗೆ ಕಾಂಪೋಸ್ಟ್ ಅಂಗಳವನ್ನು ಸ್ಥಾಪಿಸಿ ಅಲ್ಲಿಗೆ ವಿಲೇವಾರಿ ಮಾಡಬೇಕು. ಇದರಿಂದ ನಾಯಿ, ಹಂದಿ, ಹೆಗ್ಗಣ, ಜಿರಳೆ ಇತರೆ ಕ್ರಿಮಿಕೀಟಗಳ ಕಾಟದಿಂದ ತಪ್ಪಿಸಿ, ಗ್ರಾಮದ ನೈರ್ಮಲ್ಯವನ್ನು ಉತ್ತಮಪಡಿಸಬಹುದು ಹಾಗೂ ಸಾಂಕ್ರಾಮಿಕ ರೋಗಗಳನ್ನು ತಡೆಗಟ್ಟಬಹುದು.
- ಗ್ರಾಮಸ್ಥರು ಕನಿಷ್ಠ ತಿಂಗಳಿಗೊಮ್ಮೆ ಶ್ರಮದಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಗ್ರಾಮವನ್ನು ಸ್ವಚ್ಛವಾಗಿಡಬೇಕು.
- ಬಯಲು ಮಲ ವಿಸರ್ಜನೆಯನ್ನು ಸಂಪೂರ್ಣವಾಗಿ ನಿಷೇಧಿಸುವುದು.

# ಮಹಿಳೆಯರ ಪಾತ್ರ

- ಗ್ರಾಮೀಣ ಮಹಿಳೆಯರು ನೀರು ಸರಬರಾಜು ಮತ್ತು ನೈರ್ಮಲ್ಯ ಯೋಜನೆ ಗಳಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಆಗುವ ಅನುಕೂಲಗಳು
- ಮನೆಯ ಬಾಗಿಲಿಗೆ ನೀರು ಸರಬರಾಜು ದೂರ ಹೋಗಿ ನೀರು ತರುವ ಪ್ರಮೇಯ ಇಲ್ಲ.
- ವಿಶೇಷವಾಗಿ ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಅನುಕೂಲ
- ಸಮಯದ ಉಳಿತಾಯ, ಉಳಿದ ಸಮಯದಲ್ಲಿ ಮಕ್ಕಳ ಪಾಲನೆ, ಮನರಂಜನೆ, ವಯೋವೃದ್ಧರ ರಕ್ಷಣಾ ಸೇವೆ
- ಆರೋಗ್ಯ ಮಟ್ಟದಲ್ಲಿ ಸುಧಾರಣೆ

# ಮಹಿಳೆಯರ ಪ್ರಮುಖ ಜವಾಬ್ದಾರಿ

- ವೈಯಕ್ತಿಕ, ಕೌಟುಂಬಿಕ ಸ್ವಚ್ಛತೆ ಮತ್ತು ಸಮುದಾಯ ನೈರ್ಮಲ್ಯದಡಿ ಆರೋಗ್ಯ ಸೂತ್ರಗಳನ್ನು ಪಾಲಿಸಿ ಅವುಗಳನ್ನು ತಮ್ಮ ಮನೆಯವರೆಲ್ಲರೂ ಅನುಸರಿಸಿ ಕುಟುಂಬದ ಆರೋಗ್ಯ ಮಟ್ಟವನ್ನು ಉತ್ತಮಪಡಿಸಿಕೊಳ್ಳ ಸಹಾಯಕರಾಗುವುದು
- ಗೃಹ ಶೌಚಾಲಯವನ್ನು ಹೊಂದಿ, ಅದನ್ನು ಸ್ವಚ್ಛ ರೀತಿಯಲ್ಲಿ ಉಪಯೋಗಿಸುವುದು
- ಗೃಹ ಶೌಚಾಲಯ ಇಲ್ಲದಿದ್ದಲ್ಲಿ ಮಹಿಳೆಯರ ಸಾಮೂಹಿಕ ಶೌಚಾಲಯವನ್ನು ನಿರ್ಮಿಸಿ ನಿರ್ವಹಿಸುವುದು
- ನೀರಿನ ಶುಲ್ಕವನ್ನು ತಪ್ಪದೆ ಪಂಚಾಯತಿಗೆ/ಸಮಿತಿಗೆ ಪಾವತಿಸುವುದು.
- ನೀರು ಮತ್ತು ನೈರ್ಮಲ್ಯ ಸೌಲಭ್ಯಗಳನ್ನು ಉತ್ತಮವಾಗಿಟ್ಟುಕೊಳ್ಳಲು ಕುಟುಂಬದವರನ್ನು ಪ್ರೋತ್ಸಾಹಿಸುವುದು
- ಆಶಾ ಕಾರ್ಯಕರ್ತೆಯರ, ಅಂಗನವಾಡಿ ಕಾರ್ಯಕರ್ತೆಯರ, ಮಹಿಳಾ ಆರೋಗ್ಯ ಸಹಾಯಕಿಯರ ಸಹಾಯದಿಂದ ಯುವತಿಯರ ಸಭೆಯನ್ನು ಏರ್ಪಡಿಸಿ, ಗ್ರಾಮ ನೈರ್ಮಲ್ಯ ಸಮಸ್ಯೆಗಳನ್ನು ಪರಿಹರಿಸಲು ಶ್ರಮದಾನ ಏರ್ಪಡಿಸುವುದು.
- ನೀರಿನಿಂದ ಹರಡುವ ರೋಗ ಪ್ರಕರಣಗಳು ವರದಿಯಾದಾಗ ಆರೋಗ್ಯ ಇಲಾಖೆಗೆ ತಿಳಿಸುವುದು ಮತ್ತು ನಿಯಂತ್ರಣ ಕೈಗೊಳ್ಳುವುದು
- ನಿಯತಕಾಲಿಕವಾಗಿ ಗ್ರಾಮ ಸ್ವಚ್ಛತೆ ಬಗ್ಗೆ ಅರಿವು ಮೂಡಿಸುವ ಚಟುವಟಿಕೆಗಳನ್ನು ಏರ್ಪಡಿಸುವುದು.

# ಸ್ವಚ್ಛ ಭಾರತ್ ಮಿಷನ್

ಸ್ವಚ್ಛ ಭಾರತ ಮಿಷನ್ ಕಾರ್ಯಕ್ರಮದ ಪ್ರಮುಖ ಉದ್ದೇಶ ಗ್ರಾಮೀಣ ಪ್ರದೇಶದಲ್ಲಿ ರೂಡಿಯಲ್ಲಿರುವ ಅನಾಗರಿಕ ಪದ್ದತಿಯಾದ ಬಯಲು ಬಹಿರ್ದೆಸೆಯನ್ನು ಕೊನೆಗಾಣಿಸಿ, ಗ್ರಾಮೀಣ ಜನರಲ್ಲಿ ಆರೋಗ್ಯ ಮತ್ತು ಜೀವನ ಮಟ್ಟವನ್ನು ಸುಧಾರಿಸುವುದಾಗಿದೆ. ಇದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಪ್ರತಿ ಮನೆಯಲ್ಲಿ ಶೌಚಾಲಯ ನಿರ್ಮಿಸಿ ಬಳಸುವಂತೆ ಪ್ರೇರೇಪಿಸಿ ದೇಶದ ಪ್ರತಿಯೊಂದು ಗ್ರಾಮವನ್ನು ಬಯಲು ಬಹಿರ್ದೆಸೆ ಮುಕ್ತ ಸ್ಥಿತಿಗೆ ಪರಿವರ್ತಿಸುವ ದಿಸೆಯಲ್ಲಿ ಕೇಂದ್ರ  ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಡಿಯಲ್ಲಿ ಜಾರಿಗೊಳ್ಳುತ್ತಿರುವ ಕಾರ್ಯಕ್ರಮವೇ ಸ್ವಚ್ಛ ಭಾರತ ಮಿಷನ್

# ಯೋಜನೆಯ ಉದ್ದೇಶ

- ಗ್ರಾಮೀಣ ಸಮುದಾಯಕ್ಕೆ ನೈರ್ಮಲ್ಯದ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವುದು.
- ಬಯಲು ಮಲ ವಿಸರ್ಜನೆಯ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವುದು.
- ಎಲ್ಲಾ ಕುಟುಂಬಗಳೂ ಶೌಚಾಲಯ ನಿರ್ಮಿಸಿಕೊಂಡು ಬಳಸುವಂತೆ ಪ್ರೇರೇಪಿಸುವುದು.
- ಎಲ್ಲಾ ಶಾಲೆ ಮತ್ತು ಅಂಗನವಾಡಿಗಳಿಗೆ ಶೌಚಾಲಯ ಸೌಲಭ್ಯಗಳನ್ನು ಒದಗಿಸುವುದು.
- ಮಕ್ಕಳಲ್ಲಿ ನೈರ್ಮಲ್ಯದ ಅಭ್ಯಾಸಗಳನ್ನು ಉತ್ತೇಜಿಸುವುದು.
- ಗ್ರಾಮ ಪಂಚಾಯಿತಿಗಳಲ್ಲಿ ಘನ &ದ್ರವ ತ್ಯಾಜ್ಯದ ಸೂಕ್ತ ನಿರ್ವಹಣೆ.

# ಘಟಕಾಂಶಗಳು

- ವೈಯಕ್ತಿಕ ಗೃಹ ಶೌಚಾಲಯ
- ಶಾಲಾ  ಶೌಚಾಲಯ
- ಅಂಗನವಾಡಿ ಶೌಚಾಲಯ
- ಗುಂಪು ಶೌಚಾಲಯ (ಸಮುದಾಯ ಶೌಚಾಲಯ)
- ಘನ ಮತ್ತು ದ್ರವ ತ್ಯಾಜ್ಯ ಸೂಕ್ತ ನಿರ್ವಹಣೆ

# ಘಟಕಾಂಶವಾರು ಅನುದಾನದ ಲಭ್ಯತೆ

| ಕ್ರ.ಸಂ | ವಿವರ | ಪ್ರೋತ್ಸಾಹ ಧನ |
|---|---|---|
| ೧ | ವೈಯಕ್ತಿಕ ಶೌಚಾಲಯ | ರೂ. ೧೦೦೦೦/-<br>೧೨೦೦೦/- |
| | ಪರಿಶಿಷ್ಟಜಾತಿ / ಪರಿಶಿಷ್ಟ ಪಂಗಡದ ಕುಟುಂಬಗಳಿಗೆ | ರೂ. ೧೫೦೦೦/- |
| | ವೈಯಕ್ತಿಕ ಒಡೆತನದ ಗುಂಪು ಶೌಚಾಲಯ | ರೂ. ೧೮೦೦೦೦/- |
| ೨ | ಶಾಲಾ ಶೌಚಾಲಯ | ರೂ. ೩೫೦೦೦/ |
| ೩ | ಅಂಗನವಾಡಿ ಶೌಚಾಲಯ | ರೂ. ೮೦೦೦/- |
| ೬ | ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ | ರೂ.೭ ಲಕ್ಷ ದಿಂದ<br>ರೂ.೨೦ಲಕ್ಷದವರೆಗೆ. |

# ವೈಯಕ್ತಿಕ/ಗುಂಪು ಶೌಚಾಲಯ ಪ್ರೋತ್ಸಾಹ ಧನದ ವಿವರ

| | |
|---|---|
| ನಿರ್ಮಲ ಭಾರತ ಅಭಿಯಾನ | ಕೇಂದ್ರ ರೂ.೯೦೦೦/-<br>ರಾಜ್ಯ ರೂ.೩೦೦೦/- |
| | ರೂ ೧೨,೦೦೦/- |
| ಪರಿಶಿಷ್ಟ ಜಾತಿ ಮತ್ತು ಪಂಗಡದ ಕುಟುಂಬಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಹೆಚ್ಚುವರಿ ಮೊತ್ತ ರೂ.೩೦೦೦/- ಸೇರಿಸಿ ರೂ.೧೫,೦೦೦/- ಪಡೆಯಲು ಅವಕಾಶವಿದೆ | |

# ಫಲಾನುಭವಿಗಳು ಯಾರು

- ಬಿ.ಪಿ.ಎಲ್ ವರ್ಗದ ಎಲ್ಲಾ ಕುಟುಂಬಗಳು.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಎಲ್ಲಾ ಕುಟುಂಬಗಳು.
- ನಿರ್ಬಂಧಿತ ಎ.ಪಿ.ಎಲ್ ಕುಟುಂಬಗಳು.
- ಮಹಿಳಾ ಪ್ರಧಾನ ಕುಟುಂಬಗಳು
- ವಿಕಲ ಚೇತನ ಕುಟುಂಬಗಳು
- ಸಣ್ಣ ಮತ್ತು ಅತಿ ಸಣ್ಣ ರೈತರು.
- ಭೂ ರಹಿತ ಕಾರ್ಮಿಕರು.

# ಅನುಷ್ಠಾನ ವಿಧಾನ ಹಾಗೂ ಕಾರ್ಯತಂತ್ರ

- ಪಂಚಾಯತ್ ರಾಜ್ ಸಂಸ್ಥೆಗಳ ಮೂಲಕ ಅನುಷ್ಠಾನ.
- ಜಿಲ್ಲಾ ಪಂಚಾಯತ್‌ನಲ್ಲಿ ಜಿಲ್ಲಾ ನೀರು ಮತ್ತು ನೈರ್ಮಲ್ಯ ಮಿಷನ್ ಸ್ಥಾಪನೆ.
- ಆರೋಗ್ಯ, ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಾರ್ತೆ, ಮುಂತಾದ ಇಲಾಖೆಗಳ ಸಹಭಾಗಿತ್ವ.
- ಸರ್ಕಾರೇತರ ಸಂಸ್ಥೆಗಳು, ಸಮುದಾಯ ಆಧಾರಿತ ಸಂಸ್ಥೆಗಳು, ಸಮೂಹ ಮಾಧ್ಯಮಗಳ ಸಹಕಾರ ಹಾಗೂ ಸಮುದಾಯದ ಪಾಲ್ಗೊಳ್ಳುವಿಕೆ.
- ಐ.ಇ.ಸಿ ಮತ್ತು ಸಾಮರ್ಥ್ಯಾಭಿವೃದ್ಧಿ ಚಟುವಟಿಕೆಗಳ ಮೂಲಕ ಉತ್ತೇಜನ.

# ಪ್ರೋತ್ಸಾಹ ಧನ ಪಡೆಯುವ ವಿಧಾನ

- ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಳ್ಳುವ ಅರ್ಹ ಫಲಾನುಭವಿ ಗ್ರಾಮ ಪಂಚಾಯತಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸತಕ್ಕದ್ದು.
- ಶೌಚಾಲಯ ನಿರ್ಮಿಸಿದ ನಂತರ ಫಲಾನುಭವಿಯ ಬ್ಯಾಂಕಿನ ಖಾತೆಗೆ ಪಾವತಿ.
- ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ ಯೋಜನೆಯಡಿ ಪ್ರಯೋಜನ  ಪಡೆಯಲು ಗ್ರಾಮ ಪಂಚಾಯತಿಯಲ್ಲಿ ಉದ್ಯೋಗ ಚೀಟಿ ಪಡೆದಿರತಕ್ಕದ್ದು.
- ಪರಿಸರ ಸ್ನೇಹಿ, ಉತ್ತಮ ಗುಣಮಟ್ಟದ ಕಟ್ಟಡ ನಿರ್ಮಾಣ ಸಾಮಾಗ್ರಿಗಳನ್ನು ಬಳಸತಕ್ಕದ್ದು